ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾ ರಾದರೂ ಪಡದರೆ ದರಖಾಸ್ತುದಾರನ ಪುರೂ ತೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಸ್ಮೆಂಟ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಆಗುವ ತೇವಣಿ ಮೊಬಲಗನ್ನು ಹರಾಜ್ ಖೈಮಾದವಡ ನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಬೈರ್ ಚಪರಖಾ ಸ್ತುದಾರ ಕೊಡತಕ್ಕದ್ದು. ಮತ್ತು ಬಾಕೀ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾ ಜಾದ ತಾರೀ ಖು ಲಾಗಾಯತು 15ನೇ ದಿವಸ ಸೂರ್ಯಾಸ್ತ ಮಯಕ್ಕೆ ಮುಂಚೆಯೇ ಆಬೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕ ದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ತೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾ ಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇ ಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ನಂತರ ನಡದ ಹರಾಜಿನಲ್ಲಿ ಹುಟ್ಟಿದ ಮೊ ಬಲಗು ಹಣ ಕೊಡಲು ತಪ್ಪಿದಂಥಾ ಪುರೂ ಹರಾಜುದಾರನ ಸವಾಲ್ ಮೊಬಲಗುಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾದಪ್ಪ ಮೊಬಲಗನ್ನ ಅವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಪುರೂ ಮೂರು ಸಾಲ್ ಆಕಾರವಿಲ್ಲದೆ ಮುಭತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತ ಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬಹಿಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ್ನ		ಷರಾ.
				ವಿಸ್ತೀರ್ಣ.	ಆಕಾರ.	
197ನೇ ನಂಬರಿನಲ್ಲಿ ಸೋಡಾದ ಹೊಸ ನಂಬರ್420	ಮಹಮದ್ ಹಬಿಬುಲ್ಲಾಸಾಬಿ	ಉದೇವಾರದ ಗ್ರಾಮದ ಗೋಮಾಳದಲ್ಲಿ	(1) ಪೂರ್ವಕ್ಕೆ—ಸರ್ವೆ ನಂಬರ್ 224ನೇ ಜಮೀನ್ (2) ಪಶ್ಚಿಮಕ್ಕೆ—ಬಾಳಗೋಡು ಗಡಿ (3) ದಕ್ಷಿಣಕ್ಕೆ—ಸರ್ವೆ ನಂಬರ್ 197ನೇ ಗೋಮಾಳ (4) ಉತ್ತರಕ್ಕೆ—ಅರೇಹಳ್ಳಿ ಗಡಿ	ಎಕರೆ 82 ಗುಂಟೆ 27	..	ಖಾಯಂದರ 1-೮—೦ ಎಕರೆ 1ಕ್ಕೆ ೦ ರೂಪಾಯಿ ದರ 1—೦—೦ ಪ್ರಮಾಣ ಹರಾಜಾದನಂತರ ಚಡದರಖಾಸ್ತುದಾರನು ಡಿಪಾಜಿಟ್ ಕಂದಾಯದ ಬಾಕಿಯನ್ನು ಚುಕ್ತಾ ಮಾಡಿಕೊಂಡ ಮೇಲೆ ಪಟ್ಟಾ ಕೊಡಲ್ಪಡುವದು.

ತಿಳುವಳಿಕೆ ಷರಾ.—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜು ಎಕರೆ ಮೇಲೆ ಅಸ್ಸೆಸ್ಮೆಂಟ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯ್ಯವಾದಪ್ಪ ಕಮ್ಮಿ ಜಾಸ್ತೀ ಆದರೆ ಜಾ ಸ್ತೀ ಎಕರೆ ಸಂಬಂಧ ಅಸ್ಸೆಸ್ಮೆಂಟ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳೀ ದಾರನು ಬದ್ಧವಾಗಿರಬೇಕು.

ಪಿ. ಎಸ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು—ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತೆಲ್ ವಜುಗಳನ್ನು ಕ್ರಮವಾದ ವಾರಸ್‌ದಾರ್‌ಗಳಿಗೆ ಅಥವಾ ಅಧಿಕಾರ ಹೊಂದಿದ ಮುತಾಲೀಕ್‌ರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರು.	ಆಫಿಸ.	ಬುಕ್ಕು ಮತ್ತು ನಂಬರ್.	ದಸ್ತೈವಜು ಬರದುಕೊಟ್ಟವರ ಹೆಸರು ಮತ್ತು ಅಡೀರ್ಸ.	ದಸ್ತೈವಜು ಬರಕಿಕೊಂಡವರ ಹೆಸರು ಮತ್ತು ಅಡೀರ್ಸ.	ರಿಜಸ್ಟರಿಗೆ ಹಾಜರಾದ ಸಾಲಿ ಮಾಹೆ ತಾರೀಖು.	ರಿಜಸ್ಟ್ಟಾದ ಆಫೀಸಾ ದಸ್ತಬಿದ್ದ ಸಾಲಿ ಮಾಹೆ ತಾರೀಖು.	ದಸ್ತೈವಜಿನ ಸ್ವಭಾವ.
1	ಹಾಸನ	1ನೇ ಬುಕ್ಕು 199ನೆ ನಂಬರ್	ಹಾಸನ ತಾಲ್ಲೂಕು ಹಾಸನದ ಹೋಬಳಿ ಹಾಲಿವಾಗಲು ಗ್ರಾಮದಲ್ಲಿ ಯಿರುವ ಚನ್ನಕೇಶವಯ್ಯನವರ ಮಗ ಚನ್ನಕೇಶವಯ್ಯ ಮತ್ತು ಈತನ ತಮ್ಮ ನಾರಣಪ್ಪ ಮೈನರ್ ಗಾರ್ಡಿಯರ್ ಡಿಟೋ ಚನ್ನಕೇಶವಯ್ಯ	ಮಂಜರಾಬಾದ್ ತಾಲ್ಲೂಕು ಹೊಸಕೊಟೆ ಹೋಬಳಿ ಕಾರ್ಯಗೋಡು ಗ್ರಾಮದಲ್ಲಿ ಇರುವ ನಾಡು ಪಟೇಲ ಸಂಜೇಗವುಡರು ಮತ್ತು ದೊಡ್ಡಣಗವುಡರ ಮಕ್ಕಳು ಅಪ್ಪಾಜಿಗವುಡ	8—9—92	9—9—92	ಹಾಸನದ ಹೋಬಳಿ ಕಿರಗಡ್ಲು ಗ್ರಾಮದಲ್ಲಿರುವದು ಸರ್ವೆ ನಂ. 118ರ ಲಾಗಾಯತು 128ರ ವರಿಗೆ ವಟ್ಟು ಹತ್ತು ನಂಬರ್ ಎಕರೆ 66—29 ಗುಂಟೆ ಆಕಾರ 74—8—0 ಈ ಸ್ವತ್ತುಗಳು 180—0—0 ರೂಪಾಯಿನ ಕ್ರಯಪತ್ರ.
1	ಅರ್ಕಲ್‌ಗೂಡು	1ನೇ ನಂಬರ್ ಬುಕ್ಕು ನಂಬರ್ 840	ಅರ್ಕಲ್‌ಗೂಡು ತಾಲ್ಲೂಕು ಮೂಲೆ ಹೊಸಹಳ್ಳಿ, ಗ್ರಾಮದಲ್ಲಿ ಇರುವ ಕುರುಬರ ಲಕ್ಕನವಗ ರಂಗಾ	ಅರ್ಕಲ್‌ಗೂಡು ತಾಲ್ಲೂಕು ಬಸವಾಪಟ್ಟಣದಲ್ಲಿ ಇರುವ ಮಗ್ಗೆ ಶಾನುಭೋಗ ಸುಬ್ಬಾಯರ ಇವರ ಮಗ ಸುಬ್ಬಹೇಜಯ್ಯ	1892—7—30	1893—2—3	ಸಾಲ್ ವಂದಕ್ಕೆ 5-8-0 ಆಣೆ ಕೊಡುತ್ತಾ ಬರುವದಾಗಿ ನಮೂದುವುಳ್ಳ ಮಾಡತ್ತೊಟದ ಕರಾರು.
2	ಡಿಟೋ	2ನೇ ಬುಕ್ಕು ನಂಬರ್ 25	ಅರ್ಕಲ್‌ಗೂಡು ತಾಲ್ಲೂಕು ಕೊಣನೂರು ಹೊಲಗೇರಿಯಲ್ಲಿ ಇರುವ ಬಲಗೈ ಗುತ್ತಿ ಮಗ ಬಸವಾ ವುರಫ್ ಕೊಂಡ	ಅರ್ಕಲ್‌ಗೂಡು ತಾಲ್ಲೂಕು ಕೊಣನೂರು ಹೊಲಗೇರಿಯಲ್ಲಿ ಇರುವ ಬಲಗೈ ಕೆಂಗದಾಸಿ ಮಗ ತಿಮ್ಮಯ್ಯ	1892—11—18	ತಿರಸ್ಕರಿಸಿದ್ದು 1892—11—18	16 ರೂಪಾಯಿನ ಕ್ರಯ
3	ಡಿಟೋ	2ನೇ ಬುಕ್ಕು ನಂಬರ್ 31	ಅರ್ಕಲ್‌ಗೂಡು ತಾಲ್ಲೂಕು ಕೊಣನೂರು ಕಸಬಾದಲ್ಲಿ ಇರುವ ಗಂಗಡಿಕಾರ ನ್ಯೋಕ್ಕಲಿಗರ ಜಾತಿ ಮಲ್ಲನಾಯಕನ ಮಗಳು ನಿಂಗಾಜಿ 1 ಇವಳತಂಗಿ ನೀಗ ಲಿ 1 ಬನವಿ 1 ಲಚ್ಚಿ 1 ನಾಲ್ಕು ಜನಗಳು	ಅರ್ಕಲ್‌ಗೂಡು ತಾಲ್ಲೂಕು ಕೊಣನೂರಿನಲ್ಲಿ ಇರುವ ಅಗಸಾಲೆ ಕೆರೆಕೋಡಿ ನಿಂಗಾಚಾರಿ ಮಗ ಹೊನ್ನಾಚಾರಿ 1 ಹನುಮಚಾರಿನು ಸಂಜೀವಾಚಾರಿ ವುರಫ್ ಸಂಣಪ್ಪ	1892—12—29	ತಿರಸ್ಕರಿಸಿದ್ದು 1892—12—29	265 ರೂಪಾಯಿನ ಕ್ರಯ

ವಿ. ಶ್ರೀನಿವಾಸಾಚಾರ್ಲು, ರಿಜಿಸ್ಟ್ರಾರ್.

ತಾರೀಖು ನೇ ಮಾಹೆ ಮಾರ್ಚಿ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಗವರ್ನಮೆಂಟ್ ಹುಕುಂ ಬಮೋಜೀಬ ಹಾಸನ ಡಿಸ್ಟ್ರಿಕ್ಟಿನ ಪೈಕಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನಹಳ್ಳಿ ಫೂಟಿಯಲ್ಲಿ ಟೋಲ್ ಗೇಟ್ ಯಂಬ ಸುಂಕದ ಕಟ್ಟೆ ವಳಗೆ ಸ್ನ 1895ನೇ ಇಸವಿ ಜುಲೈ ಮಾಹೆ 1ನೇ ಮರ್ಕುಂ ಲಾಗಾಯತು 1896ನೇ ಇಸವಿ ಜೂ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕಾ ವಸೂಲ್ ಮಾಡುವ ಸ್ವಾತಂತ್ರ್ಯವೂ ಸ್ನ 1895ನೇ ಇಸವಿ ಏಪ್ರಿಲ್ ತಾರೀಖು 25ನೇ ಗುರುವಾರ ಸಕಲೇಶಪುರದ ಮೊಕ್ಕಾಮಿನಲ್ಲಿ ತಾಲ್ಲೂಕು ಕಚೇರಿ ವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಾಗಿ ಇರುವ ಷಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ ಮಾಡಬೇಕು. ಮತ್ತು ಸ್ನ 1876ನೇ ಇಸವಿ ನವಂಬರ್ 4ನೇ ಮರ್ಕುಂ 274ನೇ ನಂಬರು ವುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಫಾಯಿವ್ ಆಗಿರುವ ರೂಲ್ಸು ಪ್ರಕಾರ ನಡದುಕೊಳ್ಳಬೇಕು.

3. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಡಿಸ್ಟ್ರಿಕ್ಟು ಆಫಿಸರವರು ಅಧಿಕಾರ ವುಳ್ಳವರಾಗಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ 4ರಲ್ಲಿ ವಂದು ಅಂಕ ಮೊಬಲಗನ್ನು ಅಡ್ವಾನ್ಸಾಗಿ ಶೇವಣಿ ಯಿಟ್ಟು ಬಾಕಿ ಮೊಬಲಗನ್ನು 1895ನೇ ಇಸವಿ ಜುಲೈ 20ರ ಲಾಗಾಯತು ಸಮನಾದ 3 ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೇ ಕೊಡುತ್ತಾ ಬರುವದಕ್ಕೆ ಲಾಯಖಾದ ಒಬ್ಬನನ್ನು ಜಾಮೀರ್ ಕೊಡಬೇಕು. ಸದರೀ ಜಾಮೀರ್ ದಸ್ತೈವಜು ಕ್ರಮವಾಗಿ ರಿಜಸ್ಟ್ರಿ ಮಾಡಿಸಿ ಹಾಜರ್ ಪಡಿಸಬೇಕು.

5. ಶೇವಣಿ ಇಡದೆ ಇದ್ದರೆ ಅಥವಾ ಜಾಮೀರ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನುಕರವಾಗಿ ಕಂಟ್ರಾಕ್ಟ್ 2ನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತಿ ತಾರೀಖಿನ ವರಿ